



25. ಅಲ್ ಫುರ್ಕಾನ್

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಈ ಫುರ್ಕಾನನ್ನು ಸಮಸ್ತ ಜಗತ್ತಿನವರಿಗೆ ಎಚ್ಚರಿಕೆಯಾಗಲಿಕ್ಕಾಗಿ- ತನ್ನ ದಾಸನ ಮೇಲೆ ಅವತೀರ್ಣಗೊಳಿಸಿದವನು ಪರಮ ಸುಮಂಗಲನು-

تَبٰرَكَ الَّذِيْ نَزَّلَ الْفُرْقَانَ عَلٰى
عَبْدِهٖ لِيَكُوْنَ لِلْعٰلَمِيْنَ نَذِيْرَا ۙ﴿١﴾

2. ಅವನು ಭೂಮಿ-ಆಕಾಶಗಳ ಪ್ರಭುತ್ವದ ಒಡೆಯನು. ಅವನು ಯಾರನ್ನೂ ಪುತ್ರನಾಗಿಸಿ ಕೊಂಡಿಲ್ಲ. ಅವನ ಜೊತೆ ಪ್ರಭುತ್ವದಲ್ಲಿ ಯಾರೂ ಸಹಭಾಗಿ ಇಲ್ಲ. ಅವನು ಪ್ರತಿಯೊಂದು ವಸ್ತುವನ್ನೂ ಸೃಷ್ಟಿಸಿದನು. ಅನಂತರ ಅದಕ್ಕೊಂದು ವಿಧಿ ನಿಯಮವನ್ನು ನಿಶ್ಚಯಿಸಿದನು.

الَّذِيْ لَهٗ مُلْكُ السَّمٰوٰتِ وَالْاَرْضِ وَلَمْ
يَتَّخِذْ وَلَدًا وَّلَمْ يَكُنْ لَّهٗ شَرِيْكٌ فِى
الْمُلْكِ وَخَلَقَ كُلَّ شَيْءٍ فَقَدَّرَهٗ
تَقْدِيْرًا ﴿٢﴾

3. ಜನರು ಅವನನ್ನು ಬಿಟ್ಟು, ಯಾವ ವಸ್ತುವನ್ನೂ ಸೃಷ್ಟಿಸದ ಮತ್ತು ಸ್ವತಃ ಸೃಷ್ಟಿಸಲ್ಪಟ್ಟಂತಹ ವಸ್ತುಗಳನ್ನು ಆರಾಧ್ಯರನ್ನಾಗಿ ಮಾಡಿಕೊಂಡರು. ಅವು ಸ್ವತಃ ತಮಗೂ ಯಾವುದೇ ಲಾಭ ಅಥವಾ ಹಾನಿಯನ್ನುಂಟು ಮಾಡುವ ಅಧಿಕಾರ ಹೊಂದಿಲ್ಲ. ಅವು ಕೊಲ್ಲಲಾರವು, ಜೀವಂತಗೊಳಿಸಲಾರವು ಮತ್ತು ಸತ್ತವನನ್ನು ಪುನಃ ಎಬ್ಬಿಸಲಾರವು.

وَاتَّخَذُوْا مِنْ دُوْنِهٖۤ اٰلِهَةً لَّا
يَخْلُقُوْنَ شَيْئًا وَّهُمْ يُخْلَقُوْنَ وَلَا
يَمْلِكُوْنَ لِاَنْفُسِهِمْ ضَرًّا وَّلَا نَفْعًا
وَّلَا يَمْلِكُوْنَ مَوْتًا وَّلَا حَيٰوةً وَّلَا نُشُوْرًا ﴿٣﴾

4. (ಪ್ರವಾದಿಯ ಮಾತನ್ನು ನಿರಾಕರಿಸಿದ) ಸತ್ಯನಿಷೇಧಿಗಳು "ಈ ಫುರ್ಕಾನ್ ಒಂದು ಕಪೋಲ ಕಲ್ಪಿತ ವಸ್ತು. ಇದನ್ನು ಈ ವ್ಯಕ್ತಿಯು ತಾನೇ ಸೃಷ್ಟಿಸಿಕೊಂಡಿದ್ದು ಬೇರೆ ಕೆಲವರು ಈ ಕಾರ್ಯದಲ್ಲಿ ಇವನಿಗೆ ಸಹಾಯ ಮಾಡಿದ್ದಾರೆ" ಎನ್ನುತ್ತಾರೆ. ಇವರು ದೊಡ್ಡ ಅಕ್ರಮ ಹಾಗೂ ಹಸಿ ಸುಳ್ಳಿಗೆ ಇಳಿದಿದ್ದಾರೆ.

وَقَالَ الَّذِيْنَ كَفَرُوْۤا اِنْ هٰذَاۤ اِلَّاۤ اِفْكُ
افْتَرٰىهُ وَاَعَانَهٗ عَلَيْهِ قَوْمٌ اٰخَرُوْنَ ۚ
فَقَدْ جَآءُوْ ظُلْمًا وَّزُوْرًا ۚ﴿٤﴾ معانقة ١

5. "ಇದೆಲ್ಲಾ ಹಳೇ ಕಾಲದವರು ಬರೆದಿಟ್ಟ ವಿಷಯಗಳಾಗಿವೆ.

وَقَالُوْۤا اَسَاطِيْرُ الْاَوَّلِيْنَ اكْتَتَبَهَا فَهِيَ

ಅದನ್ನೇ ಇವನು ಬರೆಯಿಸಿ ಕೊಳ್ಳುತ್ತಾನೆ ಮತ್ತು ಅದನ್ನು ಬೆಳಗು ಬೈಗುಗಳಲ್ಲಿ ಅವನಿಗೆ ಓದಿ ಹೇಳಲಾಗುತ್ತದೆ" ಎಂದೂ ಅವರು ಹೇಳುತ್ತಾರೆ.	تُمْلٰى عَلَيْهِ بُكْرَةً وَّ اَصِيْلًا ﴿٥﴾
6. ಪೈಗಂಬರರೇ, "ಭೂಮಿ-ಆಕಾಶಗಳ ರಹಸ್ಯವನ್ನು ಅರಿತಿರುವಾತನು ಇದನ್ನು ಅವತೀರ್ಣ ಗೊಳಿಸಿರುತ್ತಾನೆ" ಎಂದು ಇವರೊಡನೆ ಹೇಳಿರಿ. ವಾಸ್ತವದಲ್ಲಿ ಅವನು ಅತ್ಯಂತ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.	قُلْ اَنْزَلَهُ الَّذِيْ يَعْلَمُ السِّرَّ فِي السَّمٰوٰتِ وَ الْاَرْضِ ؕ اِنَّهٗ كَانَ غَفُوْرًا رَّحِيْمًا ﴿٦﴾
7. (ಇವರು) "ಆಹಾರ ಸೇವಿಸುವ ಮತ್ತು ಪೇಟೆಗಳಲ್ಲಿ ಸಂಚರಿಸುವ ಈ ವ್ಯಕ್ತಿ ಅದೆಂತಹ ಪ್ರವಾದಿ? ಇವನ ಜೊತೆಗಿದ್ದು, (ನಿರಾಕರಿಸುವವರನ್ನು) ಗದರಿಸಲಿಕ್ಕಾಗಿ ಇವನ ಬಳಿಗೆ ಒಬ್ಬ ದೇವಚರನನ್ನೇಕೆ ಕಳುಹಿಸಲಾಗಿಲ್ಲ?	وَ قَالُوْا مَالِ هٰذَا الرَّسُوْلِ يَاْكُلُ الطَّعَامَ وَ يَمْشِيْ فِي الْاَسْوَاقِ ؕ لَوْ لَاۤ اُنْزِلَ اِلَيْهِ مَلَكٌ فَيَكُوْنَ مَعَهٗ نَذِيْرًا ﴿٧﴾
8. ಅಥವಾ ಕನಿಷ್ಠ ಪಕ್ಷ ಇವನಿಗಾಗಿ ಒಂದು ನಿಧಿಯನ್ನಾದರೂ ಇಳಿಸಬಹುದಿತ್ತು ಅಥವಾ ಇವನ ಬಳಿಯಲ್ಲಿ ಒಂದು ತೋಟ ವಾದರೂ ಇದ್ದು ಅದರಿಂದ ಇವನು (ನಿಶ್ಚಿಂತನಾಗಿ) ಉಣ್ಣ ಬಹುದಿತ್ತು ಎನ್ನುತ್ತಾರೆ ಮತ್ತು ಈ ಅಕ್ರಮಿಗಳು, "ನೀವಂತೂ ಒಬ್ಬ ಮಾಟ ಪೀಡಿತನನ್ನು ಹಿಂಬಾಲಿಸುತ್ತಿರುವಿರಿ" ಎನ್ನುತ್ತಾರೆ.	اَوْ يُلْقٰۤى اِلَيْهِ كَنْزٌ اَوْ تَكُوْنُ لَهٗ جَنَّةٌ يَّاْكُلُ مِنْهَا ؕ وَ قَالَ الظّٰلِمُوْنَ اِنْ تَتَّبِعُوْنَ اِلَّا رَجُلًا مَّسْحُوْرًا ﴿٨﴾
9. ನೋಡಿರಿ, ಇವರು ಎಂತೆಂತಹ ವಾದಗಳನ್ನು ನಿಮ್ಮ ಮುಂದಿ ಡುತ್ತಿದ್ದಾರೆ. ಇವರು ಎಷ್ಟರ ಮಟ್ಟಿಗೆ ದಾರಿ ತಪ್ಪಿದ್ದಾರೆಂದರೆ ಸರಿಯಾದ ಮಾತೇ ಇವರಿಗೆ ತೋಚುವುದಿಲ್ಲ.	اُنْظُرْ كَيْفَ ضَرَبُوْا لَكَ الْاَمْثَالَ فَضَلُّوْا فَلَا يَسْتَطِيْعُوْنَ سَبِيْلًا ﴿٩﴾ ع
10. ಅವನು ಮಹಾ ಸುಮಂಗಲನು. ಅವನಿಚ್ಛಿಸಿದರೆ, ಇವರು ಹೇಳು ವಂತಹ ವಸ್ತುಗಳಿಗಿಂತಲೂ ಶ್ರೇಷ್ಠವಾದವುಗಳನ್ನು ನಿಮಗೆ ದಯಪಾಲಿಸಬಲ್ಲನು. ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿ ರುವ (ಒಂದಲ್ಲ) ಅನೇಕ ಉದ್ಯಾನಗಳನ್ನೂ ದೊಡ್ಡ ದೊಡ್ಡ ಅರಮನೆಗಳನ್ನೂ ದಯಪಾಲಿಸಬಲ್ಲನು.	تَبٰرَكَ الَّذِيْۤ اِنْ شَآءَ جَعَلَ لَكَ خَيْرًا مِّنْ ذٰلِكَ جَنّٰتٍ تَجْرِيْ مِنْ تَحْتِهَا الْاَنْهٰرُ ۙ وَ يَجْعَلْ لَّكَ قُصُوْرًا ﴿١٠﴾
11. ವಾಸ್ತವದಲ್ಲಿ ಇವರು, 'ಆ ಘಳಿಗೆ'ಯನ್ನು ಸುಳ್ಳಾಗಿಸಿ ಬಿಟ್ಟಿದ್ದಾರೆ.[1] ಆ ಘಳಿಗೆಯನ್ನು ಸುಳ್ಳಾಗಿಸುವವನಿಗಾಗಿ ನಾವು ಧಗಧಗಿಸುವ ಬೆಂಕಿಯನ್ನು ಸಿದ್ಧಗೊಳಿಸಿಟ್ಟಿದ್ದೇವೆ.	بَلْ كَذَّبُوْا بِالسَّاعَةِ ۟ وَ اَعْتَدْنَا لِمَنْ كَذَّبَ بِالسَّاعَةِ سَعِيْرًا ﴿١١﴾

1. ಅರ್ಥಾತ್- ನಿರ್ಣಾಯಕ ದಿನವನ್ನು.

12. ಅದು ಇವರನ್ನು ದೂರದಿಂದ ಕಂಡಾಗ ಇವರು ಅದರ ಆಕ್ರೋಶವನ್ನು ಮತ್ತು ಆವೇಶದ ಆರ್ಭಟವನ್ನು ಕೇಳುವರು.

إِذَا رَأَتْهُم مِّن مَّكَانٍ بَعِيدٍ سَمِعُوا لَهَا
تَغَيُّظًا وَزَفِيرًا ﴿١٢﴾

13. ಮತ್ತು ಇವರು ಕೈಕಾಲು ಕಟ್ಟಲ್ಪಟ್ಟು ಅದರ ಒಂದು ಇಕ್ಕಟ್ಟಾದ ಜಾಗದಲ್ಲಿ ತುರುಕಿಸಲ್ಪಟ್ಟಾಗ ತಮ್ಮ ಮರಣಕ್ಕಾಗಿ ಪ್ರಾರ್ಥಿಸ ತೊಡಗುವರು.

وَإِذَا أُلْقُوا مِنْهَا مَكَانًا ضَيِّقًا
مُّقَرَّنِينَ دَعَوْا هُنَالِكَ ثُبُورًا ﴿١٣﴾

14. (ಆಗ ಅವರೊಡನೆ) ಇಂದು ಒಂದು ಮರಣವನ್ನಲ್ಲ, ಅನೇಕ ಮರಣಗಳಿಗಾಗಿ ಪ್ರಾರ್ಥಿಸಿಕೊಳ್ಳಿರಿ (ಎನ್ನಲಾಗುವುದು).

لَا تَدْعُوا الْيَوْمَ ثُبُورًا وَاحِدًا وَادْعُوا
ثُبُورًا كَثِيرًا ﴿١٤﴾

15. ಈ ಪರಿಣಾಮ ಒಳ್ಳೆಯದೋ ಅಥವಾ ದೇವಭಯವುಳ್ಳ ಧರ್ಮನಿಷ್ಠರಿಗೆ ವಾಗ್ದಾನ ಮಾಡಲಾಗಿರುವ, ಅವರ ಕರ್ಮದ ಸತ್ಫಲವೂ ಪ್ರಯಾಣದ ಕೊನೆಯ ಘಟ್ಟವೂ ಆಗಿರುವ ಶಾಶ್ವತ ಸ್ವರ್ಗ ಒಳ್ಳೆಯದೋ ಎಂದು ಇವರೊಡನೆ ಕೇಳಿರಿ.

قُلْ أَذَٰلِكَ خَيْرٌ أَمْ جَنَّةُ الْخُلْدِ الَّتِي
وُعِدَ الْمُتَّقُونَ ۚ كَانَتْ لَهُمْ
جَزَاءً وَمَصِيرًا ﴿١٥﴾

16. ಅದರಲ್ಲಿ ಅವರ ಪ್ರತಿಯೊಂದು ಇಚ್ಛೆಯೂ ಪೂರ್ತಿಗೊಳ್ಳುವುದು. ಅವರು ಅದರಲ್ಲಿ ಸದಾ ಕಾಲ ವಾಸಿಸುವರು. ಅದನ್ನು ದಯಪಾಲಿಸುವುದು ನಿಮ್ಮ ಪ್ರಭುವಿನ ಮೇಲೆ ಬದ್ಧವಾಗಿರುವ ಒಂದು ವಾಗ್ದಾನವಾಗಿರುತ್ತದೆ.

لَّهُمْ فِيهَا مَا يَشَاءُونَ خَالِدِينَ ۚ كَانَ
عَلَىٰ رَبِّكَ وَعْدًا مَّسْئُولًا ﴿١٦﴾

17. (ನಿಮ್ಮ ಪ್ರಭು) ಇವರನ್ನೂ ಇಂದು ಇವರು ಅಲ್ಲಾಹನನ್ನು ಬಿಟ್ಟು ಪೂಜಿಸುತ್ತಿರುವ ಇವರ ಆರಾಧ್ಯರನ್ನೂ ಸುತ್ತುಗಟ್ಟಿ ತರುವ ದಿನ ಅದೇ ಆಗಿರುವುದು. ತರುವಾಯ ಅವರೊಡನೆ, "ನಮ್ಮ ಈ ದಾಸರನ್ನು ಪಥಭ್ರಷ್ಟಗೊಳಿಸಿದವರು ನೀವೋ ಅಥವಾ ಇವರು ಸ್ವತಃ ಭ್ರಷ್ಟರಾಗಿದ್ದರೋ" ಎಂದು ಅವನು ಕೇಳುವನು.

وَيَوْمَ يَحْشُرُهُمْ وَمَا يَعْبُدُونَ مِن
دُونِ اللَّهِ فَيَقُولُ أَأَنتُمْ أَضْلَلْتُمْ
عِبَادِي هَٰؤُلَاءِ أَمْ هُمْ ضَلُّوا السَّبِيلَ ﴿١٧﴾

18. ಆಗ ಅವರು, "ನೀನು ಪರಮ ಪಾವನನು. ನಿನ್ನ ಹೊರತು ಇತರರನ್ನು ನಮ್ಮ ರಕ್ಷಕ ಮಿತ್ರರನ್ನಾಗಿ ಮಾಡುವುದು ನಮಗೆ ಭೂಷಣವಾಗಿರಲಿಲ್ಲ. ಆದರೆ ನೀನು ಇವರಿಗೂ ಇವರ ಪೂರ್ವಿಕ ರಿಗೂ ಸಾಕಷ್ಟು ಜೀವನ ಸಾಧನಗಳನ್ನು ನೀಡಿದೆ. ಎಷ್ಟೆಂದರೆ, ಕೊನೆಗೆ ಇವರು ಉಪದೇಶವನ್ನು ಮರೆತುಬಿಟ್ಟರು ಮತ್ತು ದುರ್ಗತಿಗೊಳಗಾಗಿ ಬಿಟ್ಟರು" ಎನ್ನುವರು.

قَالُوا سُبْحَانَكَ مَا كَانَ يَنبَغِي لَنَا أَن نَّتَّخِذَ
مِن دُونِكَ مِنْ أَوْلِيَاءَ وَلَٰكِن مَّتَّعْتَهُمْ وَ
آبَاءَهُمْ حَتَّىٰ نَسُوا الذِّكْرَ وَكَانُوا قَوْمًا بُورًا ﴿١٨﴾

19. ಈ ರೀತಿ (ನಿಮ್ಮ ಆರಾಧ್ಯರು) ನೀವಿಂದು ಹೇಳುತ್ತಿರುವ

فَقَدْ كَذَّبُوكُم بِمَا تَقُولُونَ فَمَا تَسْتَطِيعُونَ

ಮಾತುಗಳನ್ನು ಸುಳ್ಳಾಗಿಸುವರು[2]; ಅನಂತರ ನೀವು ನಿಮ್ಮ ದುರ್ಗತಿಯನ್ನೂ ನಿವಾರಿಸಲಾರಿರಿ. ಎಲ್ಲಿಂದಲೂ ಸಹಾಯವನ್ನೂ ಪಡೆಯಲಾರಿರಿ. ನಿಮ್ಮಲ್ಲಿ ಯಾರೇ ಅಕ್ರಮವೆಸಗಿದರೂ ಅವನಿಗೆ ನಾವು ಮಹಾ ಯಾತನೆಯ ಸವಿಯನ್ನು ಉಣಿಸುವೆವು.

صَرْفًا وَّلَا نَصْرًا ۚ وَمَنْ يَّظْلِمْ مِّنْكُمْ
نُذِقْهُ عَذَابًا كَبِيْرًا ﴿١٩﴾

20. ಪೈಗಂಬರರೇ, ನಿಮಗಿಂತ ಮುಂಚೆ ನಾವು ರವಾನಿಸಿದ್ದ ಸಂದೇಶ ವಾಹಕರೆಲ್ಲರೂ ಆಹಾರ ಸೇವಿಸುವವರು ಮತ್ತು ಪೇಟೆಗಳಲ್ಲಿ ಸಂಚರಿಸುವವರೇ ಆಗಿದ್ದರು. ವಾಸ್ತವದಲ್ಲಿ ನಾವು ನಿಮ್ಮನ್ನು ಪರಸ್ಪರರ ಪಾಲಿಗೆ ಪರೀಕ್ಷಾ ಸಾಧನವನ್ನಾಗಿ ಮಾಡಿರುತ್ತೇವೆ.[3] ನೀವು ತಾಳ್ಮೆ ವಹಿಸುತ್ತೀರಾ?[4] ನಿಮ್ಮ ಪ್ರಭು ಎಲ್ಲವನ್ನೂ ವೀಕ್ಷಿಸುತ್ತಿದ್ದಾನೆ.

وَمَآ اَرْسَلْنَا قَبْلَكَ مِنَ الْمُرْسَلِيْنَ
اِلَّآ اِنَّهُمْ لَيَاْكُلُوْنَ الطَّعَامَ وَيَمْشُوْنَ
فِى الْاَسْوَاقِ ۗ وَجَعَلْنَا بَعْضَكُمْ لِبَعْضٍ
فِتْنَةً ۗ اَتَصْبِرُوْنَ ۚ وَكَانَ رَبُّكَ بَصِيْرًا ﴿٢٠﴾ ع

الجزء ١٩

21. *ನಮ್ಮ ಮುಂದೆ ಹಾಜರಾಗಲಿಕ್ಕಿದೆಯೆಂಬ ಭಯವನ್ನಿರಿಸಿಕೊಳ್ಳದವರು, "ನಮ್ಮ ಬಳಿಗೆ ದೇವಚರರೇಕೆ ಕಳುಹಿಸಲ್ಪಡಲಿಲ್ಲ? ಅಥವಾ ನಾವು ನಮ್ಮ ಪ್ರಭುವನ್ನು ನೋಡುವಂತೆ ಯಾಕಾಗಲಿಲ್ಲ?" ಎನ್ನುತ್ತಾರೆ. ಇವರು ತಮ್ಮೊಳಗೆ ದೊಡ್ಡ ಅಹಂಭಾವವನ್ನಿರಿಸಿಕೊಂಡಿದ್ದಾರೆ ಮತ್ತು ವಿದ್ರೋಹದಲ್ಲಿ ಹದಮೀರಿ ಹೋಗಿದ್ದಾರೆ.

وَقَالَ الَّذِيْنَ لَا يَرْجُوْنَ لِقَآءَنَا لَوْلَآ
اُنْزِلَ عَلَيْنَا الْمَلٰٓئِكَةُ اَوْ نَرٰى رَبَّنَا ۗ
لَقَدِ اسْتَكْبَرُوْا فِيْٓ اَنْفُسِهِمْ وَعَتَوْ
عُتُوًّا كَبِيْرًا ﴿٢١﴾

22. ಇವರು ದೇವಚರರನ್ನು ಕಾಣುವ ದಿನವು ಅಪರಾಧಿಗಳ ಪಾಲಿಗೆ ಸಂತಸದ ದಿನವಾಗಿರಲಾರದು- "ದೇವಾ, ಶರಣು-ಶರಣು" ಎಂದು ಚೀರಾಡುವರು.

يَوْمَ يَرَوْنَ الْمَلٰٓئِكَةَ لَا بُشْرٰى يَوْمَئِذٍ
لِّلْمُجْرِمِيْنَ وَيَقُوْلُوْنَ حِجْرًا مَّحْجُوْرًا ﴿٢٢﴾

23. ಅವರು ಮಾಡಿಟ್ಟಿರುವ ಎಲ್ಲಾ ಕರ್ಮಗಳನ್ನು ನಾವು ಧೂಳಿನಂತೆ ಹಾರಿಸಿಬಿಡುವೆವು.

وَقَدِمْنَآ اِلٰى مَا عَمِلُوْا مِنْ عَمَلٍ
فَجَعَلْنٰهُ هَبَآءً مَّنْثُوْرًا ﴿٢٣﴾

24. ಅಂದು ಸ್ವರ್ಗಕ್ಕೆ ಅರ್ಹರಾದವರು ಮಾತ್ರ ಒಳ್ಳೆಯ ಜಾಗದಲ್ಲಿ

اَصْحٰبُ الْجَنَّةِ يَوْمَئِذٍ خَيْرٌ مُّسْتَقَرًّا

2. ಈ ಸೂಕ್ತಗಳಲ್ಲಿ ಆರಾಧ್ಯರು ಎಂದು ಹೇಳಲಾಗಿರುವುದು ಮೂರ್ತಿ, ಸೂರ್ಯ ಅಥವಾ ಚಂದ್ರನ ಕುರಿತಲ್ಲ. ಬದಲಾಗಿ ಭೂಲೋಕದಲ್ಲಿ ಜನರು ತಮ್ಮ ಆರಾಧ್ಯರನ್ನಾಗಿ ಮಾಡಿಕೊಂಡ ದೇವಚರರು ಮತ್ತು ಮಹಾ ಪುರುಷರ ಕುರಿತಾಗಿದೆ ಎಂದು ಹಿನ್ನೆಲೆಯಿಂದ ವ್ಯಕ್ತವಾಗುತ್ತದೆ.

3. ಅರ್ಥಾತ್- ಪ್ರವಾದಿ ಮತ್ತು ಸತ್ಯವಿಶ್ವಾಸಿಗಳು ಸತ್ಯನಿಷೇಧಿಗಳ ಪಾಲಿಗೆ ಪರೀಕ್ಷಾ ಸಾಧನವಾಗಿದ್ದಾರೆ. ಅಂತೆಯೇ ಸತ್ಯನಿಷೇಧಿಗಳು, ಸತ್ಯವಿಶ್ವಾಸಿಗಳು ಮತ್ತು ಪ್ರವಾದಿಯ ಪಾಲಿಗೆ.

4. ಅರ್ಥಾತ್- ಈ ಯುಕ್ತಿಯನ್ನು ಕರಗತ ಮಾಡಿಕೊಂಡ ಬಳಿಕ ಪರೀಕ್ಷೆಯ ಈ ಸ್ಥಿತಿ, ನೀವು ಕಾರ್ಯಪ್ರವೃತ್ತರಾಗಿರುವ ಉದ್ದೇಶದ ಪಾಲಿಗೆ ಅತ್ಯಂತ ಹಿತಕರವಾದುದೆಂಬ ತಾಳ್ಮೆಯ ಭಾವ ನಿಮ್ಮಲ್ಲಿ ಬಂದು ಬಿಟ್ಟಿತೇ? ಈಗಲಾದರೂ ಪರೀಕ್ಷೆಯ ಅವಧಿಯಲ್ಲಿ ಅನಿವಾರ್ಯವಾಗಿ ತಿನ್ನಬೇಕಾದ ಏಟುಗಳನ್ನು ತಿನ್ನಲು ನೀವು ಸನ್ನದ್ಧರಾಗಿದ್ದೀರಾ?

*ಇಲ್ಲಿಂದ **19ನೆಯ** ಕಾಂಡ ಆರಂಭ.

وَّاَحۡسَنُ مَقِيۡلًا ﴿۲۴﴾

ತಂಗುವರು ಮತ್ತು ಮಧ್ಯಾಹ್ನವನ್ನು ಕಳೆಯಲು ಉತ್ತಮ ಸ್ಥಳ ಪಡೆಯುವರು.

وَيَوۡمَ تَشَقَّقُ السَّمَآءُ بِالۡغَمَامِ وَنُزِّلَ الۡمَلٰٓـئِكَةُ تَنۡزِيۡلًا ﴿۲۵﴾

25. ಅಂದು ಒಂದು ಮೋಡವು ಆಕಾಶವನ್ನು ಸೀಳುತ್ತಾ ಪ್ರತ್ಯಕ್ಷ ವಾಗುವುದು ಮತ್ತು ದೇವಚರರ ತಂಡ ತಂಡಗಳೇ ಇಳಿಸಲ್ಪ ಡುವುವು.

اَلۡمُلۡكُ يَوۡمَـئِذِ اۨلۡحَـقُّ لِلرَّحۡمٰنِ‌ؕ وَكَانَ يَوۡمًا عَلَى الۡكٰفِرِيۡنَ عَسِيۡرًا ﴿۲۶﴾

26. ಅಂದು ನಿಜವಾದ ಸಾರ್ವಭೌಮತೆಯು ಕೇವಲ ರಹ್ಮಾನನದ್ದಾಗಿರು ವುದು ಮತ್ತು ಅದು ಸತ್ಯನಿಷೇಧಿಗಳಿಗೆ ಬಹಳ ಕಠಿಣ ದಿನ ವಾಗಿರುವುದು.

وَيَوۡمَ يَعَضُّ الظَّالِمُ عَلٰى يَدَيۡهِ يَقُوۡلُ يٰلَيۡتَنِى اتَّخَذۡتُ مَعَ الرَّسُوۡلِ سَبِيۡلًا ﴿۲۷﴾

27. ಆ ದಿನ ಅಕ್ರಮಿಯು ತನ್ನ ಕೈಗಳನ್ನು ಕಚ್ಚಿಕೊಳ್ಳುವನು ಮತ್ತು, "ಅಕಟ! ನಾನು ಪ್ರವಾದಿಯೊಂದಿಗೆ ಸಹಕರಿಸುತ್ತಿದ್ದರೆ!

يٰوَيۡلَتٰى لَيۡتَنِىۡ لَمۡ اَتَّخِذۡ فُلَانًا خَلِيۡلًا ﴿۲۸﴾

28. ಅಯ್ಯೋ ನನ್ನ ದುರ್ದೆಸೆಯೇ! ಅಕಟ! ನಾನು ಆ ವ್ಯಕ್ತಿಯನ್ನು ಮಿತ್ರನಾಗಿ ಮಾಡಿಕೊಳ್ಳದಿರುತ್ತಿದ್ದರೆ!

لَـقَدۡ اَضَلَّنِىۡ عَنِ الذِّكۡرِ بَعۡدَ اِذۡ جَآءَنِىۡ‌ؕ وَكَانَ الشَّيۡطٰنُ لِلۡاِنۡسَانِ خَذُوۡلًا ﴿۲۹﴾

29. ಅವನ ದುರ್ಬೋಧನೆಗೆ ಮರುಳಾಗಿ ನನ್ನ ಬಳಿಗೆ ಬಂದಿದ್ದ ಸದ್ಬೋಧನೆಯನ್ನು ನಾನು ಸ್ವೀಕರಿಸಲಿಲ್ಲ. ಶೈತಾನನು ಮಾನವನ ಮಟ್ಟಿಗೆ ಮಹಾ ವಿಶ್ವಾಸ ಘಾತುಕನಾಗಿ ಬಿಟ್ಟನು" ಎಂದು ಹೇಳುವನು

وَقَالَ الرَّسُوۡلُ يٰرَبِّ اِنَّ قَوۡمِى اتَّخَذُوۡا هٰذَا الۡقُرۡاٰنَ مَهۡجُوۡرًا ﴿۳۰﴾

30. ಮತ್ತು ಸಂದೇಶವಾಹಕರು, "ನನ್ನ ಪ್ರಭೂ, ನನ್ನ ಜನಾಂಗದವರು ಈ ಕುರ್‌ಆನನ್ನು ಅಪಹಾಸ್ಯಕ್ಕೆ ಗುರಿಪಡಿಸಿದ್ದರು" ಎನ್ನುವರು.

وَكَذٰلِكَ جَعَلۡنَا لِكُلِّ نَبِىٍّ عَدُوًّا مِّنَ الۡمُجۡرِمِيۡنَ‌ؕ وَكَفٰى بِرَبِّكَ هَادِيًا وَّنَصِيۡرًا ﴿۳۱﴾

31. ಪೈಗಂಬರರೇ, ನಾವು ಇದೇ ರೀತಿಯಲ್ಲಿ ಅಪರಾಧಿಗಳನ್ನು ಪ್ರತಿಯೊಬ್ಬ ಪ್ರವಾದಿಯ ಶತ್ರುವನ್ನಾಗಿ ಮಾಡಿರುತ್ತೇವೆ ಮತ್ತು ನಿಮ್ಮ ಮಾರ್ಗದರ್ಶನಕ್ಕೂ ಸಹಾಯಕ್ಕೂ ನಿಮ್ಮ ಪ್ರಭುವೇ ಸಾಕು.

وَقَالَ الَّذِيۡنَ كَفَرُوۡا لَوۡلَا نُزِّلَ عَلَيۡهِ الۡقُرۡاٰنُ جُمۡلَةً وَّاحِدَةً ۛۚ كَذٰلِكَ ۛۚ لِنُثَبِّتَ بِهٖ فُؤَادَكَ وَرَتَّلۡنٰهُ تَرۡتِيۡلًا ﴿۳۲﴾ ع

32. ಸತ್ಯನಿಷೇಧಿಗಳು, "ಇವನ ಮೇಲೆ ಇಡೀ ಕುರ್‌ಆನ್ ಏಕಕಾಲದಲ್ಲಿ ಏಕೆ ಅವತೀರ್ಣ ಗೊಳಿಸಲ್ಪಡಲಿಲ್ಲ?" ಎಂದು ಕೇಳುತ್ತಾರೆ. ಇದನ್ನು ನಿಮಗೆ ಸರಿಯಾಗಿ ಮಂದಟ್ಟು ಮಾಡಿಕೊಡಲಿಕ್ಕಾಗಿ ಹೀಗೆ ಮಾಡಲಾಗಿದೆ ಮತ್ತು (ಈ ಉದ್ದೇಶಕ್ಕಾಗಿಯೇ) ನಾವು ಇದಕ್ಕೆ ಒಂದು ನಿರ್ದಿಷ್ಟ ಕ್ರಮಕ್ಕನುಸಾರ ಬೇರೆ ಬೇರೆ ಭಾಗಗಳ ರೂಪ ಕೊಟ್ಟಿದ್ದೇವೆ.

33. ಅವರು ನಿಮ್ಮ ಮುಂದೆ ಯಾವುದಾದರೂ ವಿಚಿತ್ರ ವಿಷಯ (ಅಥವಾ ವಿಚಿತ್ರ ಪ್ರಶ್ನೆ) ತಂದಾಗ ನಾವು ಅದಕ್ಕೆ ಸಮರ್ಪಕವಾದ ಉತ್ತರವನ್ನು ಸಕಾಲದಲ್ಲಿ ಕೊಟ್ಟುಬಿಟ್ಟೆವು ಮತ್ತು ಅತ್ಯುತ್ತಮ ರೀತಿಯಲ್ಲಿ ವಿವರಿಸಿದೆವು.

وَلَا يَأْتُونَكَ بِمَثَلٍ إِلَّا جِئْنَاكَ بِالْحَقِّ وَأَحْسَنَ تَفْسِيرًا ﴿٣٣﴾

34. ಅಧೋಮುಖರಾಗಿ ನರಕದ ಕಡೆಗೆ ದೂಡಲ್ಪಡುವವರ ನೆಲೆಯು ಬಹಳ ಕೆಟ್ಟದ್ದು ಮತ್ತು ಅವರ ಮಾರ್ಗವು ತೀರಾ ತಪ್ಪು.

الَّذِينَ يُحْشَرُونَ عَلَىٰ وُجُوهِهِمْ إِلَىٰ جَهَنَّمَ أُولَٰئِكَ شَرٌّ مَكَانًا وَأَضَلُّ سَبِيلًا ﴿٣٤﴾

35. ನಾವು ಮೂಸಾರಿಗೆ ಗ್ರಂಥ ನೀಡಿದೆವು[5] ಮತ್ತು ಅವರ ಜೊತೆಗೆ ಅವರ ಸಹೋದರ ಹಾರೂನರನ್ನು ಸಹಾಯಕನಾಗಿ ನೇಮಿಸಿದೆವು.

وَلَقَدْ آتَيْنَا مُوسَى الْكِتَابَ وَجَعَلْنَا مَعَهُ أَخَاهُ هَارُونَ وَزِيرًا ﴿٣٥﴾

36. ನಮ್ಮ ಸೂಕ್ತಗಳನ್ನು ಸುಳ್ಳಾಗಿಸಿ ಬಿಟ್ಟಿರುವ ಆ ಜನಾಂಗದ ಕಡೆಗೆ ಹೋಗಿರೆಂದು ಅವರೊಡನೆ ಹೇಳಿದೆವು. ಕೊನೆಗೆ ನಾವು ಅವರನ್ನು ನಾಶಗೊಳಿಸಿ ಬಿಟ್ಟೆವು.

فَقُلْنَا اذْهَبَا إِلَى الْقَوْمِ الَّذِينَ كَذَّبُوا بِآيَاتِنَا فَدَمَّرْنَاهُمْ تَدْمِيرًا ﴿٣٦﴾

37. ನೂಹರ ಜನಾಂಗವು ಸಂದೇಶವಾಹಕರನ್ನು ಸುಳ್ಳಾಗಿಸಿದಾಗ ಅವರ ಗತಿಯೂ ಇದೇ ಆಗಿತ್ತು. ನಾವು ಅವರನ್ನು ಮುಳುಗಿಸಿ ಬಿಟ್ಟೆವು ಮತ್ತು ಸಮಸ್ತ ಲೋಕದವರಿಗೆ ಒಂದು ಪಾಠವಾಗಿ ಮಾಡಿ ಬಿಟ್ಟೆವು ಮತ್ತು ಆ ಅಕ್ರಮಿಗಳಿಗೆ ನಾವು ಒಂದು ವೇದನಾಯುಕ್ತ ಯಾತನೆಯನ್ನು ಸಿದ್ಧಗೊಳಿಸಿ ಇಟ್ಟಿದ್ದೇವೆ.

وَقَوْمَ نُوحٍ لَمَّا كَذَّبُوا الرُّسُلَ أَغْرَقْنَاهُمْ وَجَعَلْنَاهُمْ لِلنَّاسِ آيَةً وَأَعْتَدْنَا لِلظَّالِمِينَ عَذَابًا أَلِيمًا ﴿٣٧﴾

38. ಇದೇ ರೀತಿ 'ಆದ್', 'ಸಮೂದ್' ಮತ್ತು 'ರಸ್ಸ್'ನವರ[6] ಮಧ್ಯದ ಶತಮಾನಗಳ ಅನೇಕರೂ ನಾಶಗೊಳಿಸಲ್ಪಟ್ಟಿದ್ದಾರೆ.

وَعَادًا وَثَمُودَ وَأَصْحَابَ الرَّسِّ وَقُرُونًا بَيْنَ ذَٰلِكَ كَثِيرًا ﴿٣٨﴾

39. ನಾವು ಅವರ ಪೈಕಿ ಪ್ರತಿಯೊಬ್ಬರಿಗೂ (ಹಿಂದೆ ನಾಶ ಹೊಂದಿದವರ) ದೃಷ್ಟಾಂತಗಳನ್ನು ಕೊಡುತ್ತಾ ಬೋಧಿಸಿದೆವು ಮತ್ತು ಕೊನೆಗೆ ಎಲ್ಲರನ್ನೂ ನಾಶಗೊಳಿಸಿಬಿಟ್ಟೆವು.

وَكُلًّا ضَرَبْنَا لَهُ الْأَمْثَالَ وَكُلًّا تَبَّرْنَا تَتْبِيرًا ﴿٣٩﴾

5. ಇಲ್ಲಿ ಗ್ರಂಥವೆಂದು ಹೇಳಲಾಗಿರುವುದು ಪ್ರಾಯಶಃ ಈಜಿಪ್ಟ್‌ನಿಂದ ಹೊರಟ ಬಳಿಕ ಹ. ಮೂಸಾರಿಗೆ(ಅ) ನೀಡಲಾದ ಗ್ರಂಥದ ಕುರಿತಲ್ಲ. ಪ್ರವಾದಿತ್ವದ ಪದವಿಗೆ ನೇಮಕಗೊಂಡ ನಂತರ ಈಜಿಪ್ಟ್‌ನಿಂದ ಹೊರಡುವ ತನಕದ ಅವಧಿಯಲ್ಲಿ ಹ. ಮೂಸಾರಿಗೆ(ಅ) ನೀಡಲಾಗುತ್ತಿದ್ದ ನಿರ್ದೇಶನಗಳ ಕುರಿತು ಈ ಮಾತು ಹೇಳಲಾಗಿದೆ. ಇದರಲ್ಲಿ ಹ. ಮೂಸಾ(ಅ) ಅಲ್ಲಾಹನ ಆಜ್ಞೆಯಂತೆ ಫಿರ್‌ಔನನ ಆಸ್ಥಾನದಲ್ಲಿ ನೀಡಿದ ಪ್ರವಚನಗಳೂ ಸೇರಿವೆ. ಅಂತೆಯೇ ಫಿರ್‌ಔನ್‌ನ ವಿರುದ್ಧ ಹೋರಾಟದ ವೇಳೆ ಅವರಿಗೆ ನೀಡಲಾಗುತ್ತಿದ್ದ ಮಾರ್ಗದರ್ಶನಗಳೂ ಅದರಲ್ಲಿ ಸೇರಿವೆ. ಕುರ್‌ಆನಿನಲ್ಲಿ ಅಲ್ಲಲ್ಲಿ ಈ ವಿಷಯಗಳ ಪ್ರಸ್ತಾಪವಿದೆ. ಆದರೆ ಈ ವಿಷಯಗಳು ತೌರಾತ್‌ನಲ್ಲಿ ಸೇರಿಸಲ್ಪಟ್ಟಿಲ್ಲವೆಂಬುದೇ ಪ್ರಬಲ ಗುಮಾನಿಯಾಗಿದೆ. ತೌರಾತ್‌ನ ಆರಂಭ, ಈಜಿಪ್ಟ್‌ನಿಂದ ಹೊರಟ ನಂತರ ಸೀನಾಯ್ ಪರ್ವತದಲ್ಲಿ ಶಿಲಾಫಲಕಗಳ ರೂಪದಲ್ಲಿ ಕೊಡಲಾದ ಹತ್ತು ಆದೇಶಗಳಿಂದಾಗುತ್ತದೆ.

6. 'ರಸ್ಸ್' ಎಂದು ಅರಬಿ ಭಾಷೆಯಲ್ಲಿ ಹಳೆಯದಾದ ಪಾಳು ಬಾವಿಗೆ ಹೇಳುತ್ತಾರೆ. ತಮ್ಮ ಪ್ರವಾದಿಯನ್ನು ಬಾವಿಗೆಸೆದು ಅಥವಾ ನೇತಾಡಿಸಿ ಸಾಯಿಸಿದ್ದ ಜನರು 'ಅಸ್ಹಾಬುರ್ರಸ್ಸ್' ಅಥವಾ 'ರಸ್ಸ್'ನವರಾಗಿದ್ದಾರೆ.

40. ಅತ್ಯಂತ ಕೆಟ್ಟ ಮಳೆಗೆರೆಯಲಾಗಿದ್ದ ಆ ನಾಡನ್ನು ಇವರು ಹಾದು ಹೋಗಿದ್ದಾರೆ.[7] ಇವರು ಅವರ ಅವಸ್ಥೆಯನ್ನು ಕಂಡಿರಲಿಕ್ಕಿಲ್ಲವೇ? ಆದರೆ ಇವರು ಮರಣಾನಂತರ ಇನ್ನೊಂದು ಜೀವನದ ನಿರೀಕ್ಷೆಯನ್ನೇ ಇಟ್ಟುಕೊಂಡಿಲ್ಲ.

وَلَقَدْ أَتَوْا عَلَى الْقَرْيَةِ الَّتِي أُمْطِرَتْ مَطَرَ السَّوْءِ أَفَلَمْ يَكُونُوا يَرَوْنَهَا بَلْ كَانُوا لَا يَرْجُونَ نُشُورًا

41. ಇವರು ನಿಮ್ಮನ್ನು ಕಂಡಾಗಲೆಲ್ಲಾ ಅಪಹಾಸ್ಯ ಮಾಡುತ್ತಾರೆ. "ಅಲ್ಲಾಹನು ಸಂದೇಶವಾಹಕನಾಗಿ ಮಾಡಿ ಕಳುಹಿಸಿದುದು ಇವನನ್ನೇ?

وَإِذَا رَأَوْكَ إِنْ يَتَّخِذُونَكَ إِلَّا هُزُوًا أَهَٰذَا الَّذِي بَعَثَ اللَّهُ رَسُولًا

42. ನಾವು ನಮ್ಮ ಆರಾಧ್ಯರ ಭಕ್ತಿಯಲ್ಲಿ ಅಚಲರಾಗದೆ ಇದ್ದಿದ್ದರೆ ಇವನು ನಮ್ಮನ್ನು ದಾರಿಗೆಡಿಸಿ ಅವುಗಳಿಂದ ಬೇರ್ಪಡಿಸಿಯೇ ಬಿಡುತ್ತಿದ್ದನು" (ಎನ್ನುತ್ತಾರೆ). ಸರಿ, ಯಾತನೆಯನ್ನು ಕಂಡಾಗ ಯಾರು ಪಥಭ್ರಷ್ಟತೆಯಲ್ಲಿ ಬಹುದೂರ ಸಾಗಿದ್ದನೆಂಬುದು ಸ್ವತಃ ಇವರಿಗೇ ತಿಳಿದು ಬರುವ ಕಾಲ ದೂರವಿಲ್ಲ.

إِنْ كَادَ لَيُضِلُّنَا عَنْ آلِهَتِنَا لَوْلَا أَنْ صَبَرْنَا عَلَيْهَا وَسَوْفَ يَعْلَمُونَ حِينَ يَرَوْنَ الْعَذَابَ مَنْ أَضَلُّ سَبِيلًا

43. ತನ್ನ ಚಿತ್ತಾಕಾಂಕ್ಷೆಯನ್ನು ತನ್ನ ದೇವನಾಗಿ ಮಾಡಿಕೊಂಡಿರುವಾತನ ಸ್ಥಿತಿಯ ಬಗ್ಗೆ ನೀವೆಂದಾದರೂ ವಿವೇಚಿಸಿದಿರಾ? ನೀವು ಇಂತಹವರನ್ನು ಸರಿದಾರಿಗೆ ತರುವ ಹೊಣೆಯನ್ನು ವಹಿಸಿಕೊಳ್ಳಬಲ್ಲಿರಾ?

أَرَأَيْتَ مَنِ اتَّخَذَ إِلَٰهَهُ هَوَاهُ أَفَأَنْتَ تَكُونُ عَلَيْهِ وَكِيلًا

44. ಇವರಲ್ಲಿ ಹೆಚ್ಚಿನವರು ಆಲಿಸುತ್ತಾರೆಂದೂ ಗ್ರಹಿಸುತ್ತಾರೆಂದೂ ಭಾವಿಸುತ್ತೀರಾ? ಇವರಂತು ಪ್ರಾಣಿಗಳಂತಿದ್ದಾರೆ. ಅಷ್ಟೇ ಅಲ್ಲ ಅದಕ್ಕಿಂತಲೂ ನಿಕೃಷ್ಟರು.

أَمْ تَحْسَبُ أَنَّ أَكْثَرَهُمْ يَسْمَعُونَ أَوْ يَعْقِلُونَ إِنْ هُمْ إِلَّا كَالْأَنْعَامِ بَلْ هُمْ أَضَلُّ سَبِيلًا

45. ನಿಮ್ಮ ಪ್ರಭು ಹೇಗೆ ನೆರಳನ್ನು ಹರಡಿಸಿ ಬಿಡುತ್ತಾನೆಂಬುದನ್ನು ನೀವು ಕಂಡಿಲ್ಲವೇ? ಅವನು ಇಚ್ಛಿಸಿದ್ದರೆ ಅದನ್ನು ಶಾಶ್ವತ ನೆರಳಾಗಿಸಿ ಬಿಡುತ್ತಿದ್ದನು. ನಾವು ಸೂರ್ಯನನ್ನು ಅವರ ಮಾರ್ಗದರ್ಶಿಯಾಗಿ ಮಾಡಿರುವೆವು.[8]

أَلَمْ تَرَ إِلَىٰ رَبِّكَ كَيْفَ مَدَّ الظِّلَّ وَلَوْ شَاءَ لَجَعَلَهُ سَاكِنًا ثُمَّ جَعَلْنَا الشَّمْسَ عَلَيْهِ دَلِيلًا

46. ಅನಂತರ (ಸೂರ್ಯನು ಮೇಲೇರುತ್ತಿದ್ದ ಹಾಗೆ) ನಾವು ಆ ನೆರಳನ್ನು ಕ್ರಮೇಣ ನಮ್ಮ ಕಡೆಗೆ ಸೆಳೆಯುತ್ತ ಹೋಗುತ್ತೇವೆ.[9]

ثُمَّ قَبَضْنَاهُ إِلَيْنَا قَبْضًا يَسِيرًا

7. ಅರ್ಥಾತ್- ಲೂತ್ ಸಮುದಾಯದ ಪ್ರದೇಶ. ಕೆಟ್ಟ ಮಳೆಯೆಂದರೆ ಕಲ್ಲಿನ ಮಳೆ.

8. ನಾವಿಕರ ಪಾರಿಭಾಷಿಕದಲ್ಲಿ 'ದಲೀಲ್' ಎಂದರೆ ನಾವೆಗಳಿಗೆ ದಾರಿ ತೋರಿಸುವ ವ್ಯಕ್ತಿ. ನೆರಳನ್ನು ಸೂರ್ಯನ ಮೇಲೆ 'ದಲೀಲ್' ಮಾಡುವುದೆಂದರೇ - ನೆರಳಿನ ಸಂಕುಚನ-ವಿಕಸನ, ಸೂರ್ಯನ ಮೇಲೇರುವಿಕೆ-ಕೆಳಗಿಳಿಯುವಿಕೆ ಹಾಗೂ ಉದಯ - ಅಸ್ತಮಾನಗಳನ್ನು ಹೊಂದಿಕೊಂಡಿದೆ ಎಂದಾಗಿದೆ.

9. ತನ್ನ ಬಳಿಗೆ ಸೆಳೆಯುವುದೆಂದರೆ ಅದೃಶ್ಯಗೊಳಿಸುವುದು ಮತ್ತು ನಾಶ ಪಡಿಸುವುದು. ಏಕೆಂದರೆ ನಾಶವಾಗುವುದೆಲ್ಲವೂ ಅಲ್ಲಾಹನೆಡೆಗೇ

47. ರಾತ್ರಿಯನ್ನು ನಿಮಗೆ ಉಡುಪಾಗಿಯೂ ನಿದ್ದೆಯನ್ನು ಪ್ರಶಾಂತಿ ಯಾಗಿಯೂ ಹಗಲನ್ನು ಎದ್ದೇಳುವ ಸಮಯವಾಗಿಯೂ ಮಾಡಿದವನು ಅಲ್ಲಾಹನೇ ಆಗಿರುತ್ತಾನೆ.

وَهُوَ الَّذِي جَعَلَ لَكُمُ الَّيْلَ لِبَاسًا وَّالنَّوْمَ سُبَاتًا وَّجَعَلَ النَّهَارَ نُشُوْرًا ﴿٤٧﴾

48. ತನ್ನ ಕೃಪೆಗೆ ಮುಂಚಿತವಾಗಿ ಮಾರುತಗಳನ್ನು ಸುವಾರ್ತೆಯಾಗಿ ಕಳುಹಿಸುವವನು ಅವನೇ. ಅನಂತರ ಆಕಾಶದಿಂದ ಶುದ್ಧ ನೀರನ್ನಿಳಿಸುತ್ತಾನೆ.

وَهُوَ الَّذِيْ أَرْسَلَ الرِّيٰحَ بُشْرًا بَيْنَ يَدَيْ رَحْمَتِهٖ ۚ وَأَنْزَلْنَا مِنَ السَّمَآءِ مَآءً طَهُوْرًا ﴿٤٨﴾

49. (ಇದು) ಅದರ ಮೂಲಕ ಒಂದು ನಿರ್ಜೀವ ಪ್ರದೇಶಕ್ಕೆ ಜೀವದಾನ ಮಾಡಲಿಕ್ಕಾಗಿ ಮತ್ತು ತನ್ನ ಸೃಷ್ಟಿಯ ಪೈಕಿ ಅನೇಕ ಪ್ರಾಣಿಗಳಿಗೂ ಮನುಷ್ಯರಿಗೂ ಕುಡಿಸಲಿಕ್ಕಾಗಿ.

لِّنُحْيِيَ بِهٖ بَلْدَةً مَّيْتًا وَّنُسْقِيَهٗ مِمَّا خَلَقْنَآ أَنْعَامًا وَّأَنَاسِيَّ كَثِيْرًا ﴿٤٩﴾

50. ಅವರು ಒಂದಿಷ್ಟು ಪಾಠ ಕಲಿಯಲೆಂದು ನಾವು ಈ ಅದ್ಭುತವನ್ನು ಪದೇ ಪದೇ ಅವರ ಮುಂದೆ ತರುತ್ತೇವೆ. ಆದರೆ ಹೆಚ್ಚಿನವರು ಸತ್ಯನಿಷೇಧ ಮತ್ತು ಕೃತಘ್ನತೆಯ ಹೊರತು ಬೇರಾವುದೇ ನಿಲುಮೆಯನ್ನು ಅಂಗೀಕರಿಸಲು ನಿರಾಕರಿಸಿ ಬಿಡುತ್ತಾರೆ.

وَلَقَدْ صَرَّفْنٰهُ بَيْنَهُمْ لِيَذَّكَّرُوْا ۖ فَأَبٰىٓ أَكْثَرُ النَّاسِ إِلَّا كُفُوْرًا ﴿٥٠﴾

51. ನಾವಿಚ್ಛಿಸುತ್ತಿದ್ದರೆ ಪ್ರತಿಯೊಂದು ನಾಡಿನಲ್ಲಿಯೂ ಒಬ್ಬೊಬ್ಬ ಎಚ್ಚರಿಕೆ ನೀಡುವಾತನನ್ನು ನಿಯೋಗಿಸುತ್ತಿದ್ದೆವು.[10]

وَلَوْ شِئْنَا لَبَعَثْنَا فِيْ كُلِّ قَرْيَةٍ نَّذِيْرًا ﴿٥١﴾

52. ಆದುದರಿಂದ ಪೈಗಂಬರರೇ, ಸತ್ಯನಿಷೇಧಿಗಳ ಮಾತನ್ನು ಅನುಸರಿಸಲೇ ಬೇಡಿರಿ ಮತ್ತು ಈ ಕುರ್‌ಆನನ್ನು ತೆಗೆದುಕೊಂಡು ಅವರ ವಿರುದ್ಧ ಉಗ್ರ ಹೋರಾಟ ನಡೆಸಿರಿ.

فَلَا تُطِعِ الْكٰفِرِيْنَ وَجَاهِدْهُمْ بِهٖ جِهَادًا كَبِيْرًا ﴿٥٢﴾

53. ಎರಡು ಸಮುದ್ರಗಳನ್ನು ಸೇರಿಸಿಟ್ಟಿರುವವನು ಅವನೇ. ಒಂದು ರುಚಿಕರವೂ ಸಿಹಿಯೂ ಆಗಿದೆ. ಇನ್ನೊಂದು ಉಪ್ಪೂ ಕಹಿಯೂ ಆಗಿದೆ. ಇವೆರಡರ ಮಧ್ಯೆ ಒಂದು ತೆರೆ ಇದೆ. ಅವು ಪರಸ್ಪರ ಬೆರೆಯದಂತೆ ಮಾಡುವ ಒಂದು ತಡೆ ಇದೆ.[11]

وَهُوَ الَّذِيْ مَرَجَ الْبَحْرَيْنِ هٰذَا عَذْبٌ فُرَاتٌ وَّهٰذَا مِلْحٌ أُجَاجٌ ۚ وَجَعَلَ بَيْنَهُمَا بَرْزَخًا وَّحِجْرًا مَّحْجُوْرًا ﴿٥٣﴾

ಮರಳುತ್ತದೆ. ಎಲ್ಲ ವಸ್ತುಗಳೂ ಅವನೆಡೆಯಿಂದಲೇ ಬರುತ್ತವೆ ಮತ್ತು ಅವನೆಡೆಗೇ ಮರಳುತ್ತವೆ.

10. ಅರ್ಥಾತ್- ಹಾಗೆ ಮಾಡುವುದು ನಮ್ಮ ಸಾಮರ್ಥ್ಯಕ್ಕೆ ಅತೀತವಾಗಿರಲಿಲ್ಲ. ನಾವು ಬಯಸಿದ್ದರೆ ಅಲ್ಲಲ್ಲಿ ಪ್ರವಾದಿಗಳನ್ನು ಹುಟ್ಟಿಸುತ್ತಿದ್ದೆವು. ಆದರೆ ನಾವು ಹಾಗೆ ಮಾಡಲಿಲ್ಲ. ಸಮಸ್ತ ಜಗತ್ತಿಗಾಗಿ ನಾವು ಓರ್ವ ಪ್ರವಾದಿಯನ್ನು ನೇಮಿಸಿದೆವು. ಒಂದೇ ಸೂರ್ಯ ಸಮಸ್ತ ಜಗತ್ತಿಗೆ ಸಾಕಾಗುವಂತೆ ಈ ಏಕೈಕ ಮಾರ್ಗದರ್ಶನದ ಸೂರ್ಯ ಲೋಕದ ಸಮಸ್ತ ಜನರಿಗೆ ಸಾಕಾಗುವುದು.

11. ದೊಡ್ಡ ನದಿಯೊಂದು ಸಮುದ್ರಕ್ಕೆ ಬಂದು ಸೇರುವೆಡೆಗಳಲ್ಲಿ ಈ ಸ್ಥಿತಿ ತಲೆದೋರುತ್ತದೆ. ಅಲ್ಲದೆ ಸಮುದ್ರದಲ್ಲೂ ಹಲವೆಡೆ ಸಿಹಿನೀರಿನ ಬುಗ್ಗೆಗಳಿವೆ. ಅದರ ನೀರು ಸಮುದ್ರದ ಅತ್ಯಂತ ಕಹಿಯಾದ ನೀರಿನ ನಡುವೆ ಇದ್ದರೂ ತನ್ನ ಸಿಹಿತನವನ್ನು ಕಾಪಾಡಿಕೊಂಡಿರುತ್ತದೆ. ಉದಾ: ಬಹ್ರೇನ್ ಮತ್ತು ಪರ್ಶಿಯನ್ ಕೊಲ್ಲಿಯ ತಳದಿಂದ ಇಂತಹ ಅನೇಕ ಬುಗ್ಗೆಗಳು ಪುಟಿದೆದ್ದಿವೆ. ಅವುಗಳಿಂದ ಜನರು ಸಿಹಿ ನೀರು ಪಡೆಯುತ್ತಾರೆ.

54. ನೀರಿನಿಂದ ಒಬ್ಬ ಮಾನವನನ್ನು ಸೃಷ್ಟಿಸಿದವನೂ ಅವನೇ. ತರುವಾಯ ಅವನಿಂದ ವಂಶೀಯ ಮತ್ತು ವೈವಾಹಿಕ ಎಂಬ ಎರಡು ಬೇರೆ ಬೇರೆ ಪರಂಪರೆಗಳನ್ನು ಹೊರಡಿಸಿದನು. ನಿನ್ನ ಪ್ರಭು ಮಹಾ ಸಮರ್ಥನು.

وَهُوَ الَّذِي خَلَقَ مِنَ الْمَاءِ بَشَرًا فَجَعَلَهُ نَسَبًا وَصِهْرًا ۗ وَكَانَ رَبُّكَ قَدِيرًا ﴿٥٤﴾

55. ಜನರು ಆ ಅಲ್ಲಾಹನನ್ನು ಬಿಟ್ಟು ಅವರಿಗೆ ಲಾಭವಾಗಲಿ, ನಷ್ಟವಾಗಲಿ ಉಂಟು ಮಾಡಲಾರದವುಗಳನ್ನು ಆರಾಧಿಸುತ್ತಾರೆ. ಸತ್ಯನಿಷೇಧಿಯು ತನ್ನ ಪ್ರಭುವಿನ ವಿರುದ್ಧ ಪ್ರತಿಯೊಬ್ಬ ಬಂಡುಕೋರನ ಸಹಾಯಕನಾಗಿ ಬಿಟ್ಟಿದ್ದಾನೆ.

وَيَعْبُدُونَ مِنْ دُونِ اللَّهِ مَا لَا يَنْفَعُهُمْ وَلَا يَضُرُّهُمْ ۗ وَكَانَ الْكَافِرُ عَلَىٰ رَبِّهِ ظَهِيرًا ﴿٥٥﴾

56. ಪೈಗಂಬರರೇ, ನಾವು ನಿಮ್ಮನ್ನು ಓರ್ವ ಶುಭವಾರ್ತೆ ಹಾಗೂ ಎಚ್ಚರಿಕೆ ನೀಡುವವರಾಗಿ ಕಳುಹಿಸಿರುತ್ತೇವೆ.[12]

وَمَا أَرْسَلْنَاكَ إِلَّا مُبَشِّرًا وَنَذِيرًا ﴿٥٦﴾

57. ಇವರೊಡನೆ, "ನಾನು ಈ ಕಾರ್ಯಕ್ಕಾಗಿ ನಿಮ್ಮಿಂದ ಯಾವುದೇ ಪ್ರತಿಫಲ ಕೇಳುವುದಿಲ್ಲ. ಇಷ್ಟವಿದ್ದವನು ತನ್ನ ಪ್ರಭುವಿನ ಮಾರ್ಗವನ್ನನುಸರಿಸುವುದೇ ನನ್ನ ಪ್ರತಿಫಲ" ಎಂದು ಹೇಳಿರಿ.

قُلْ مَا أَسْأَلُكُمْ عَلَيْهِ مِنْ أَجْرٍ إِلَّا مَنْ شَاءَ أَنْ يَتَّخِذَ إِلَىٰ رَبِّهِ سَبِيلًا ﴿٥٧﴾

58. ಪೈಗಂಬರರೇ, ಸ್ವಯಂ ಜೀವಂತನೂ ಅಮರನೂ ಆಗಿರುವ ದೇವನ ಮೇಲೆ ಭರವಸೆಯಿಡಿರಿ. ಅವನ ಪ್ರಶಂಸೆಯೊಂದಿಗೆ ಅವನನ್ನು ಸ್ತುತಿಸಿರಿ. ತನ್ನ ದಾಸರ ಪಾಪಗಳ ಬಗ್ಗೆ ಅವನು ಮಾತ್ರ ಅರಿತಿದ್ದರೆ ಸಾಕು.

وَتَوَكَّلْ عَلَى الْحَيِّ الَّذِي لَا يَمُوتُ وَسَبِّحْ بِحَمْدِهِ ۚ وَكَفَىٰ بِهِ بِذُنُوبِ عِبَادِهِ خَبِيرًا ﴿٥٨﴾

59. ಅವನು ಭೂಮಿ-ಆಕಾಶಗಳನ್ನೂ ಅವುಗಳ ನಡುವೆ ಇರುವ ಸಕಲ ವಸ್ತುಗಳನ್ನೂ ಆರು ದಿನಗಳಲ್ಲಿ ಸೃಷ್ಟಿಸಿದನು. ತರುವಾಯ ಸ್ವಯಂ ಸಿಂಹಾಸನಾ ರೂಢನಾದನು. ರಹ್ಮಾನ್! ಅವನ ಘನತೆಯನ್ನು ಬಲ್ಲವರೊಡನೆ ಕೇಳಿಕೊಳ್ಳಿರಿ.

الَّذِي خَلَقَ السَّمَاوَاتِ وَالْأَرْضَ وَمَا بَيْنَهُمَا فِي سِتَّةِ أَيَّامٍ ثُمَّ اسْتَوَىٰ عَلَى الْعَرْشِ ۚ الرَّحْمَٰنُ فَاسْأَلْ بِهِ خَبِيرًا ﴿٥٩﴾

60. ಆ ರಹ್ಮಾನನಿಗೆ ಸಾಷ್ಟಾಂಗವೆರಗಿರಿ ಎಂದು ಅವರೊಡನೆ ಹೇಳಿದಾಗ, "ರಹ್ಮಾನ್ ಎಂದರೇನು? ನೀನು ಹೇಳುವವರಿಗೆ ನಾವು ಸಾಷ್ಟಾಂಗವೆರಗಬೇಕೇ?" ಎಂದು ಕೇಳುತ್ತಾರೆ. ಈ ಕರೆಯು ಅವರ ತಿರಸ್ಕಾರವನ್ನು ಇನ್ನಷ್ಟು ವೃದ್ಧಿಸುತ್ತದೆ.

وَإِذَا قِيلَ لَهُمُ اسْجُدُوا لِلرَّحْمَٰنِ قَالُوا وَمَا الرَّحْمَٰنُ أَنَسْجُدُ لِمَا تَأْمُرُنَا وَزَادَهُمْ نُفُورًا ۩ ﴿٦٠﴾

12. ಅರ್ಥಾತ್- ಸತ್ಯವಿಶ್ವಾಸಿಗೆ ಪ್ರತಿಫಲ ನೀಡುವುದಾಗಲಿ, ಸತ್ಯನಿಷೇಧಿಗೆ ಶಿಕ್ಷೆ ನೀಡುವುದಾಗಲಿ ನಿಮ್ಮ ಕೆಲಸವಲ್ಲ. ಯಾರನ್ನಾದರೂ ಸತ್ಯವಿಶ್ವಾಸದೆಡೆಗೆ ಬಲವಂತದಿಂದ ಎಳೆದು ತರಲು ಅಥವಾ ಸತ್ಯನಿಷೇಧದಿಂದ ಒತ್ತಾಯಪೂರ್ವಕ ತಡೆಯಲು ನಿಮ್ಮನ್ನು ನೇಮಿಸಲಾಗಿಲ್ಲ. ಸನ್ಮಾರ್ಗವನ್ನು ಸ್ವೀಕರಿಸುವವನಿಗೆ ಸತ್ಪರಿಣಾಮದ ಶುಭವಾರ್ತೆ ನೀಡುವುದು ಮತ್ತು ತನ್ನ ಕೇಡುಕಿನಲ್ಲಿ ದೃಢವಾಗಿ ನಿಲ್ಲುವವನಿಗೆ ಅಲ್ಲಾಹನ ಹಿಡಿತದ ಬಗ್ಗೆ ಎಚ್ಚರಿಸುವುದಷ್ಟೇ ನಿಮ್ಮ ಕೆಲಸ.

61. ಆಕಾಶದಲ್ಲಿ ಬುರುಜುಗಳನ್ನು ಮಾಡಿದವನು ಮತ್ತು ಅದರಲ್ಲಿ ಒಂದು ದೀಪ ಮತ್ತು ಹೊಳೆಯುವ ಚಂದ್ರನನ್ನು ಬೆಳಗಿಸಿದವನು ಪರಮ ಮಂಗಳಮಯನು.

تَبٰرَكَ الَّذِىۡ جَعَلَ فِى السَّمَآءِ بُرُوۡجًا وَّجَعَلَ فِيۡهَا سِرٰجًا وَّقَمَرًا مُّنِيۡرًا ﴿٦١﴾

62. ಪಾಠ ಕಲಿಯಲು ಅಥವಾ ಕೃತಜ್ಞನಾಗಲು ಬಯಸುವ ಪ್ರತಿಯೊಬ್ಬನಿಗಾಗಿ ರಾತ್ರೆ ಹಗಲುಗಳನ್ನು ಪರಸ್ಪರ ಉತ್ತರಾಧಿಕಾರಿಗಳನ್ನಾಗಿ ಮಾಡಿದವನು ಅವನೇ.

وَهُوَ الَّذِىۡ جَعَلَ الَّيۡلَ وَالنَّهَارَ خِلۡفَةً لِّمَنۡ اَرَادَ اَنۡ يَّذَّكَّرَ اَوۡ اَرَادَ شُكُوۡرًا ﴿٦٢﴾

63. ರಹ್ಮಾನನ ನಿಜವಾದ ದಾಸರು ಭೂಮಿಯ ಮೇಲೆ ಸೌಮ್ಯ ನಡಿಗೆ ನಡೆಯುತ್ತಾರೆ.[13] ತಿಳಿಗೇಡಿಗಳು ವ್ಯರ್ಥ ತಕರಾರಿಗೆ ಬಂದಾಗ, "ನಿಮಗೆ ಸಲಾಮ್" ಎಂದು ಬಿಡುತ್ತಾರೆ.

وَعِبَادُ الرَّحۡمٰنِ الَّذِيۡنَ يَمۡشُوۡنَ عَلَى الۡاَرۡضِ هَوۡنًا وَّاِذَا خَاطَبَهُمُ الۡجٰهِلُوۡنَ قَالُوۡا سَلٰمًا ﴿٦٣﴾

64. ಅವರು ತಮ್ಮ ಪ್ರಭುವಿನ ಮುಂದೆ ಸಾಷ್ಟಾಂಗವೆರಗುತ್ತಲೂ ನಿಲ್ಲುತ್ತಲೂ ರಾತ್ರಿಗಳನ್ನು ಕಳೆಯುತ್ತಾರೆ.

وَالَّذِيۡنَ يَبِيۡتُوۡنَ لِرَبِّهِمۡ سُجَّدًا وَّقِيَامًا ﴿٦٤﴾

65. ಅವರು ಹೀಗೆ ಪ್ರಾರ್ಥಿಸುತ್ತಾರೆ, "ನಮ್ಮ ಪ್ರಭೂ, ನಮ್ಮನ್ನು ನರಕದ ಯಾತನೆಯಿಂದ ರಕ್ಷಿಸು. ಅದರ ಯಾತನೆಯಂತೂ ಪ್ರಾಣಾಂತಿಕವಾಗಿದೆ.

وَالَّذِيۡنَ يَقُوۡلُوۡنَ رَبَّنَا اصۡرِفۡ عَنَّا عَذَابَ جَهَنَّمَ ۖ اِنَّ عَذَابَهَا كَانَ غَرَامًا ﴿٦٥﴾

66. ಅದು ಅತ್ಯಂತ ನಿಕೃಷ್ಟ ನೆಲೆ ಮತ್ತು ಸ್ಥಾನವಾಗಿರುತ್ತದೆ."

اِنَّهَا سَآءَتۡ مُسۡتَقَرًّا وَّمُقَامًا ﴿٦٦﴾

67. ಅವರು ಖರ್ಚು ಮಾಡುವಾಗ ದುಂದುವೆಚ್ಚವನ್ನೂ ಮಾಡುವುದಿಲ್ಲ. ಜಿಪುಣತೆಯನ್ನೂ ತೋರುವುದಿಲ್ಲ. ಅವರ ಖರ್ಚು ಇವೆರಡರ ನಡುವೆ ಸಮತೂಕದಲ್ಲಿ ನಿಂತಿರುತ್ತದೆ.

وَالَّذِيۡنَ اِذَاۤ اَنۡفَقُوۡا لَمۡ يُسۡرِفُوۡا وَلَمۡ يَقۡتُرُوۡا وَكَانَ بَيۡنَ ذٰلِكَ قَوَامًا ﴿٦٧﴾

68. ಅವರು ಅಲ್ಲಾಹನ ಹೊರತು ಇತರ ಯಾವ ಆರಾಧ್ಯನನ್ನೂ ಪ್ರಾರ್ಥಿಸುವುದಿಲ್ಲ. ಅಲ್ಲಾಹನು ಗೌರವಿಸಿರುವ ಯಾವ ಜೀವವನ್ನೂ ಅನ್ಯಾಯವಾಗಿ ಸಂಹರಿಸುವುದಿಲ್ಲ. ವ್ಯಭಿಚಾರವೆಸಗುವುದೂ ಇಲ್ಲ. ಈ ಕಾರ್ಯಗಳನ್ನು ಯಾರೇ ಮಾಡಿದರೂ ಅವನು ತನ್ನ ಪಾಪಗಳ ಫಲವನ್ನು ಪಡೆಯುವನು.

وَالَّذِيۡنَ لَا يَدۡعُوۡنَ مَعَ اللّٰهِ اِلٰهًا اٰخَرَ وَلَا يَقۡتُلُوۡنَ النَّفۡسَ الَّتِىۡ حَرَّمَ اللّٰهُ اِلَّا بِالۡحَقِّ وَلَا يَزۡنُوۡنَ ۚ وَمَنۡ يَّفۡعَلۡ ذٰلِكَ يَلۡقَ اَثَامًا ﴿٦٨﴾

69. ನಿರ್ಣಾಯಕ ದಿನದಂದು ಅವನಿಗೆ ಇಮ್ಮಡಿ ಯಾತನೆ ನೀಡಲಾಗು

يُّضٰعَفۡ لَهُ الۡعَذَابُ يَوۡمَ الۡقِيٰمَةِ وَ

13. ಅರ್ಥಾತ್- ದುರಹಂಕಾರದೊಂದಿಗೆ ಸೆಟೆಯುತ್ತಾ ಸೊಕ್ಕಿನಿಂದ ನಡೆಯುವುದಿಲ್ಲ. ಸರ್ವಾಧಿಕಾರಿಗಳು ಮತ್ತು ಕ್ಷೋಭೆಯುಂಟು ಮಾಡುವವರಂತೆ ನಡಿಗೆಯಿಂದ ತಮ್ಮ ಬಲಪ್ರದರ್ಶನ ಮಾಡಲು ಪ್ರಯತ್ನಿಸುವುದಿಲ್ಲ. ಸಭ್ಯನೂ, ಸತ್‍ಸ್ವಭಾವಿಯೂ ಆದ ಓರ್ವ ಉತ್ತಮ ನಡತೆಯ ವ್ಯಕ್ತಿಯಂತೆ ಅವರು ನಡೆಯುತ್ತಾರೆ.

ವುದು ಮತ್ತು ಅವನು ಅದರಲ್ಲೇ ಸದಾ ಅವಮಾನಿತನಾಗಿ ಬಿದ್ದು ಕೊಂಡಿರುವನು.

يَخْلُدْ فِيهِ مُهَانًا ﴿٦٩﴾

70. (ಈ ಪಾಪಗಳನ್ನು ಮಾಡಿದ ಬಳಿಕ) ಪಶ್ಚಾತ್ತಾಪ ಪಟ್ಟು ಸತ್ಯ ವಿಶ್ವಾಸವನ್ನು ಸ್ವೀಕರಿಸಿ, ಸತ್ಕರ್ಮಗಳನ್ನು ಮಾಡಲಾರಂಭಿಸಿದವರ ಹೊರತು. ಇಂತಹವರ ಕೆಡುಕುಗಳನ್ನು ಅಲ್ಲಾಹನು ಒಳಿತುಗಳಾಗಿ ಪರಿವರ್ತಿಸುವನು. ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕರುಣಾ ನಿಧಿಯೂ ಆಗಿರುತ್ತಾನೆ.

إِلَّا مَنْ تَابَ وَآمَنَ وَعَمِلَ عَمَلًا صَالِحًا
فَأُولَٰئِكَ يُبَدِّلُ اللَّهُ سَيِّئَاتِهِمْ حَسَنَاتٍ ۗ
وَكَانَ اللَّهُ غَفُورًا رَحِيمًا ﴿٧٠﴾

71. ಪಶ್ಚಾತ್ತಾಪ ಪಟ್ಟು ಸತ್ಕರ್ಮಗಳನ್ನು ಮಾಡಲಾರಂಭಿಸುವವನಂತು ಅಲ್ಲಾಹನ ಕಡೆಗೆ ಮರಳಬೇಕಾದ ರೀತಿಯಲ್ಲಿ ಮರಳುತ್ತಾನೆ.

وَمَنْ تَابَ وَعَمِلَ صَالِحًا فَإِنَّهُ يَتُوبُ
إِلَى اللَّهِ مَتَابًا ﴿٧١﴾

72. (ರಹ್ಮಾನನ ದಾಸರು) ಸುಳ್ಳಿಗೆ ಸಾಕ್ಷಿಗಳಾಗುವುದಿಲ್ಲ ಮತ್ತು ಅವರಿಗೆ ವ್ಯರ್ಥ ವಿಷಯಗಳ ಸಮೀಪದಿಂದ ಹಾದು ಹೋಗ ಬೇಕಾಗಿ ಬಂದಾಗ ಸಂಭಾವಿತರಂತೆ ಹಾದು ಹೋಗುತ್ತಾರೆ.

وَالَّذِينَ لَا يَشْهَدُونَ الزُّورَ وَإِذَا
مَرُّوا بِاللَّغْوِ مَرُّوا كِرَامًا ﴿٧٢﴾

73. ಅವರ ಪ್ರಭುವಿನ 'ಸೂಕ್ತ'ಗಳನ್ನು ಹೇಳಿ ಉಪದೇಶ ಮಾಡಿದಾಗ ಅವರು ಅದರ ಬಗ್ಗೆ ಕುರುಡರೂ ಕಿವುಡರೂ ಆಗಿದ್ದು ಬಿಡುವು ದಿಲ್ಲ.

وَالَّذِينَ إِذَا ذُكِّرُوا بِآيَاتِ رَبِّهِمْ لَمْ
يَخِرُّوا عَلَيْهَا صُمًّا وَعُمْيَانًا ﴿٧٣﴾

74. ಅವರು, "ನಮ್ಮ ಪ್ರಭೂ, ನಮ್ಮ ಪತ್ನಿಯರಿಂದಲೂ ಮಕ್ಕ ಳಿಂದಲೂ ನಮ್ಮ ಕಣ್ಮನಗಳನ್ನು ತಣಿಸು ಮತ್ತು ನಮ್ಮನ್ನು ಧರ್ಮನಿಷ್ಠರ ನಾಯಕರಾಗಿ ಮಾಡು" ಎಂದು ಪ್ರಾರ್ಥಿಸುತ್ತಾರೆ.[14]

وَالَّذِينَ يَقُولُونَ رَبَّنَا هَبْ لَنَا مِنْ
أَزْوَاجِنَا وَذُرِّيَّاتِنَا قُرَّةَ أَعْيُنٍ وَاجْعَلْنَا
لِلْمُتَّقِينَ إِمَامًا ﴿٧٤﴾

75. ಇವರೇ ತಮ್ಮ ಸಹನೆಯ ಫಲವನ್ನು ಉನ್ನತ ಅಂತಸ್ತಿನ ರೂಪದಲ್ಲಿ ಪಡೆಯಲಿರುವವರು. ಅವರನ್ನು ಗೌರವಪೂರ್ಣ ಅಭಿನಂದನೆಗಳೊಂದಿಗೆ ಸ್ವಾಗತಿಸಲಾಗುವುದು.

أُولَٰئِكَ يُجْزَوْنَ الْغُرْفَةَ بِمَا صَبَرُوا
وَيُلَقَّوْنَ فِيهَا تَحِيَّةً وَسَلَامًا ﴿٧٥﴾

76. ಅಲ್ಲಿ ಅವರು ಅನಂತಾನಂತ ಕಾಲ ವಾಸಿಸುವರು. ಆ ನೆಲೆ ಮತ್ತು ಆ ಸ್ಥಾನ ಅದೆಷ್ಟು ಉತ್ತಮವಾದುದು!

خَالِدِينَ فِيهَا ۚ حَسُنَتْ مُسْتَقَرًّا
وَمُقَامًا ﴿٧٦﴾

14. ಅರ್ಥಾತ್- ದೇವಭಕ್ತಿ ಮತ್ತು ಅನುಸರಣೆಯಲ್ಲಿ ನಾವು ಎಲ್ಲರಿಗಿಂತ ಮುಂದಿರಬೇಕು. ಒಳಿತು ಮತ್ತು ಸದಾಚಾರದಲ್ಲಿ ಅತ್ಯಂತ ಮುಂದುವರಿದವರಾಗಿ ಬಿಡಬೇಕು. ನಾವು ಸದಾಚಾರಿಗಳಾಗಿ ಮಾರ್ಪಟ್ಟರೆ ಸಾಲದು, ಅವರ ನಾಯಕರಾಗಿ ಮಾರ್ಪಡಬೇಕು. ನಮ್ಮಿಂದಾಗಿ ಲೋಕದಾದ್ಯಂತ ಒಳಿತು ಪಸರಿಸಬೇಕು. ಇಲ್ಲಿ ಇದನ್ನು ಪ್ರಸ್ತಾಪಿಸಲಾಗಿರುವುದರ ಉದ್ದೇಶ, ಇವರು ಸಿರಿಸಂಪತ್ತು ಮತ್ತು ಸ್ಥಾನಮಾನಗಳ ಬದಲು ಒಳಿತು ಮತ್ತು ಧರ್ಮನಿಷ್ಠೆಯಲ್ಲಿ ಪರಸ್ಪರ ಸ್ಪರ್ಧೆ ನಡೆಸುವವರಾಗಿದ್ದಾರೆ ಎಂದು ತಿಳಿಯಪಡಿಸುವುದಾಗಿದೆ.

77. ಪೈಗಂಬರರೇ, ಜನರೊಡನೆ, "ನೀವು ನನ್ನ ಪ್ರಭುವನ್ನು ಪ್ರಾರ್ಥಿಸದಿದ್ದರೆ ಅವನಿಗೇನಾಗ ಬೇಕಾಗಿದೆ.[15] ಈಗಂತು ನೀವು ಸುಳ್ಳಾಗಿಸಿ ಬಿಟ್ಟಿದ್ದೀರಿ, ಸದ್ಯವೇ ಜೀವ ಬಿಡಿಸಿಕೊಂಡು ತಪ್ಪಿಸಿಕೊಳ್ಳಲಾಗದಂತಹ ಶಿಕ್ಷೆಯನ್ನು ನೀವು ಪಡೆಯಲಿದ್ದೀರಿ" ಎಂದು ಹೇಳಿರಿ.

قُلْ مَا يَعْبَؤُا بِكُمْ رَبِّيْ لَوْلَا دُعَآؤُكُمْ
فَقَدْ كَذَّبْتُمْ فَسَوْفَ يَكُوْنُ لِزَامًا ﴿٧٧﴾

ع ١٧

---

15. ಅರ್ಥಾತ್- ನೀವು ಅಲ್ಲಾಹನೊಡನೆ ಪ್ರಾರ್ಥಿಸದಿದ್ದರೆ, ಅವನ ದಾಸ್ಯ-ಆರಾಧನೆ ಮಾಡದಿದ್ದರೆ, ನಿಮ್ಮ ಅವಶ್ಯಕತೆಗಳ ವೇಳೆ ನೆರವಿಗಾಗಿ ಅವನೊಡನೆ ಮೊರೆಯಿಡದಿದ್ದರೆ ಅಲ್ಲಾಹನ ಬಳಿ ನಿಮಗೆ ಯಾವ ಬೆಲೆಯೂ ಇರಲಾರದು. ಅವನು ನಿಮ್ಮನ್ನು ಎಳ್ಳಷ್ಟು ಲೆಕ್ಕಿಸಲಾರನು. ಸೃಷ್ಟಿ ಎಂಬ ನೆಲೆಯಲ್ಲಿ ನಿಮ್ಮ ಮತ್ತು ಕಲ್ಲುಗಳ ನಡುವೆ ಯಾವ ವ್ಯತ್ಯಾಸವೂ ಇರಲಾರದು. ಅಲ್ಲಾಹನಿಗೆ ನಿಮ್ಮಿಂದ ಯಾವ ನಿರೀಕ್ಷೆಯೂ ಇಲ್ಲ. ನೀವು ದಾಸ್ಯ-ಆರಾಧನೆ ಮಾಡದಿದ್ದರೆ ಅವನ ಯಾವ ಕೆಲಸವೂ ಸ್ಥಗಿತಗೊಳ್ಳುವುದಿಲ್ಲ. ಅವನ ಮುಂದೆ ಕೈಯೊಡ್ಡುವುದು ಮತ್ತು ಅವನಿಂದ ಪ್ರಾರ್ಥಿಸುವುದೇ ನಿಮ್ಮೆಡೆಗೆ ಕರುಣಾ ದೃಷ್ಟಿ ಬೀರುವಂತೆ ಮಾಡುವ ಸಾಧನಗಳಾಗಿವೆ. ನೀವು ಹಾಗೆ ಮಾಡದಿದ್ದರೆ ಕಸ ಕಡ್ಡಿಗಳಂತೆ ತಿರಸ್ಕರಿಸಲ್ಪಡುವಿರಿ.